**ಎಂ.ವಿ.ಸಿ. ನಂಬರ್ : 138/2022**
**ಪಿ .ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 01.09.2025

**ಪಾಟೀ ಸವಾಲು : ಎದುರುದಾರರ ಪರವಾಗಿ ಶ್ರೀ ಹೆಚ್.ಎಸ್.ಸಿ ವಕೀಲರಿಂದ**

ನಾನು ಈಗ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಮೆಣಸ ಗ್ರಾಮದಲ್ಲಿ ವಾಸವಿದ್ದೆನು. ನನ್ನ ಗಂಡ ವ್ಯವಸಾಯ ಮಾಡುತ್ತಿದ್ದರು. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಆರ್.ಟಿ.ಸಿಯನ್ನು ಹಾಜರುಪಡಿಸಿಲ್ಲ. ನನ್ನ ಗಂಡನ ಮಾಸಿಕ ವರಮಾನ ರೂ. 50,000/- ಮತ್ತು ವಾರ್ಷಿಕ ವರಮಾನ ರೂ. 6,00,000/- ಇತ್ತು ಎಂಬುದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನನ್ನ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ನಾನು ಓದಿ ತಿಳಿದುಕೊಂಡಿರುತ್ತೇನೆ.

ನನ್ನ ಗಂಡ ಅಪಘಾತದಿಂದ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ. ನನ್ನ ಗಂಡನ ಔಷಧಿಯ ಖರ್ಚು ರೂ. 10,00,000/- ಎಂದು ತೋರಿಸಿದ್ದು ಅದಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಅಂದರೆ ಇಲ್ಲ ಎನ್ನುತ್ತಾರೆ. ನನ್ನ ಗಂಡನ ಚಿಕಿತ್ಸೆಯ ಖರ್ಚು ರೂ. 10,00,000/- ಎಂದು ತೋರಿಸಿದ್ದು ಅದಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಅಂದರೆ ಇಲ್ಲ ಎನ್ನುತ್ತಾರೆ.

ಚಿಕಿತ್ಸೆಯ ವೇಳೆ ಗಳಿಕೆಯ ನಷ್ಟ ಮತ್ತು ಆದಾಯ ನಷ್ಟ ರೂ. 5,00,000/-, ಆಹಾರ ಮತ್ತು ಪೋಷಣೆಯ ಖರ್ಚು ರೂ. 5,00,000/-, ಅಂಗವೈಕಲ್ಯತೆಗೆ ಸಂಬಂಧಪಟ್ಟಂತೆ ರೂ. 25,00,000/-, ಗಳನ್ನು ಪರಿಹಾರ ಕೇಳಿದ್ದು ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಅಂದರೆ ಇಲ್ಲ ಎನ್ನುತ್ತಾರೆ. ನನ್ನ ಗಂಡ ಮೃತಪಟ್ಟ ನಂತರ ಅವರನ್ನು ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಗೆ ಶವ ಪಂಚನಾಮೆ ತೆಗೆದುಕೊಂಡು ಹೋಗಿದ್ದು ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಅಂದರೆ ಇಲ್ಲ ಎನ್ನುತ್ತಾರೆ. (ಅನಾವಶ್ಯಕ ಮತ್ತು ಅಸಂಬದ್ದ ಪ್ರಶ್ನೆಗಳನ್ನು ವಕೀಲರು ಕೇಳುತ್ತಿದ್ದು ಅಸಂಬದ್ದ ಎಂದು ತೀರ್ಮಾನಿಸಲಾಯಿತು.) ನನ್ನ ಅರ್ಜಿಯ ಕಲಂ 20 ರಲ್ಲಿ ತೋರಿಸಿರುವ 2 ರಿಂದ 8 ರವರೆಗಿನ ಪರಿಹಾರವನ್ನು ಪಡೆಯಲು ನಾನು ಬಾದ್ಯಸ್ಥಳಲ್ಲ ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಿಃ29-2-2020 ರಂದು ಅಪಘಾತವಾದಕ್ಕೆ ಸಂಬಂಧಪಟ್ಟಂತೆ ನನಗೆ ಮಾಹಿತಿ ಇದೆಯಾ ಅಂದರೆ ನನಗೆ ಯಾರೋ ದೂರವಾಣಿ ಮಾಡಿ ತಿಳಿಸಿರುತ್ತಾರೆ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಅಂದರೆ ಸರಿ. ನನ್ನ ಗಂಡ ಆ ದಿನ ಬೈಕ್ ನಲ್ಲಿ ಹೋಗುತ್ತಿದ್ದು ಕೆಎ 12 ಜೆ 3211 ನನ್ನ ಗಂಡನ ಡಿ.ಎಲ್. ಆರ್.ಸಿ ಇನ್ಶೂರೆನ್ಸ್ ಕಾಪಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ಗಂಡನ ಬೈಕ್ ನ ವಿಮಾ ಕಂಪನಿಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅಪಘಾತವೂ ಯಾವ ರೀತಿ

ಸಂಭವಿಸಿರುತ್ತದೆ ಎಂದು ನನಗೆ ಗೊತ್ತಾ ಅಂದರೆ ನನ್ನ ಗಂಡ ಆದಿನ ಹನಿ ನೀರಾವರಿ ಪೈಪ್ಗಳನ್ನು ತೆಗೆದುಕೊಂಡು ಬರಲು ಹೋಗಿದ್ದು ಅದರಲ್ಲಿ ಎಷ್ಟು ಬಂಡಲ್ ಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಆ ದಿನ ಎಷ್ಟು ಪೈಪ್ ಗಳು ಮತ್ತು ರೋಲ್ ಗಳನ್ನು ತೆಗೆದುಕೊಂಡು ಬರುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ಸದರಿ ಬೈಕ್ ನಲ್ಲಿ 2 ಕಡೆ ಪೈಪುಗಳ ಬಂಡಲ್ ಮತ್ತು ಸ್ಪಿಂಕ್ಲರ್ ಪೈಪುಗಳನ್ನು ಇಟ್ಟು ಕೊಂಡುಬರುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬೈಕ್‌ನಲ್ಲಿ ಇಬ್ಬರು ಜನ ಓಡಾಡಲು ಮಾತ್ರ ಅವಕಾಶ ಇದೆ ಅಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ**
**ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
*ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,*
*ಸೋಮವಾರಪೇಟೆ.*